# ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

**ಚುಕ್ಕೆ ಗುರುತಿನ ಪ್ರಶ್ನೆ**

ದಿನಾಂಕ : 09-03-2021 ಪ್ರಶ್ನೆ ಸಂಖ್ಯೆ : 128(856)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 09-03-2021

ಉತ್ತರಿಸುವ ಸಚಿವರು: ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು

ವಿಷಯ : ಭತ್ತ ಖರೀದಿಯ ಬೆಂಬಲ ಬೆಲೆ ನೀಡಿಕೆ ಬಗ್ಗೆ

(ಅ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಬೆಂಬಲ ಬೆಲೆಯಿಂದ (ಎಂ.ಎಸ್.ಪಿ.) ಭತ್ತ ಖರೀದಿಸಲು ಯಾವ ದಿನಾಂಕದಿಂದ ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ; ಪ್ರತಿ ಕ್ವಿಂಟಾಲಿಗೆ ನಿಗದಿಪಡಿಸಿದ ಬೆಂಬಲ ದರವೆಷ್ಟು;

(ಆ) ಸರ್ಕಾರ ಎಷ್ಟು ಮೆಟ್ರಿಕ್ ಟನ್ ಭತ್ತ ಖರೀದಿಸಲು ಅಂದಾಜಿಸಲಾಗಿದೆ; ಇದುವರೆವಿಗೂ ಎಷ್ಟು ಕ್ವಿಂಟಾಲ್ ಭತ್ತವನ್ನು ಖರೀದಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

(ಇ) ಈಗಾಗಲೇ ಖರೀದಿಸಲಾಗಿರುವ ಭತ್ತಕ್ಕೆ ಇದುವರೆವಿಗೂ ಬಿಡುಗಡೆಗೊಳಿಸಲಾದ ಮೊತ್ತವೆಷ್ಟು;ಬಿಡುಗಡೆಗೊಳಿಸಬೇಕಾಗಿರುವ ಬಾಕಿ ಮೊತ್ತವೆಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಈ) 2018-19ನೇ ಸಾಲಿನಲ್ಲಿ ಕಾಸ್ಟಿಂಗ್ ಶೀಟ್ ಕರಾರಿನ ಪ್ರಕಾರ ರೈಸ್ ಮಿಲ್ ಮಾಲೀಕರಿಗೆ ಪೂರ್ಣ ಪ್ರಮಾಣದಲ್ಲಿ ಹಣ ಪಾವತಿ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) 2019-20ನೇ ಸಾಲಿನ ಕಾಸ್ಟಿಂಗ್ ಶೀಟ್ ಪ್ರಕಾರ ರೈಸ್ ಮಿಲ್ ಮಾಲೀಕರಿಗೆ ಇದುವರೆವಿಗೂ ಹಣ ಪಾವತಿ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಪಾವತಿ ಮಾಡಬೇಕಾಗಿರುವ ಒಟ್ಟು ಮೊತ್ತವೆಷ್ಟು;

(ಊ) ರೈಸ್ ಮಿಲ್ ಮಾಲೀಕರಿಗೆ ಪ್ರತಿ ಕ್ವಿಂಟಾಲ್‌ಗೆ ನೀಡಲಾಗುತ್ತಿರುವ ಹಲ್ಲಿಂಗ್ ಚಾರ್ಜ್ ದರವೆಷ್ಟು ಹಾಗೂ ಸದರಿ ದರವನ್ನು ಯಾವ ದಿನಾಂಕದಿಂದ ಪರಿಷ್ಕರಿಸಲಾಗಿದೆ? (ವಿವರಗಳೊಡನೆ ಮಾಹಿತಿ ನೀಡುವುದು)